

# ಬಿಸಿಬಿಸಿ ICE-CREAM ಸವಿಯಲು ರೆಡಿ



2024ಕ್ಕೆ ಕಾಲಿಡುತ್ತಿದ್ದಂತೆ ಕನ್ನಡ ಚಿತ್ರರಂಗ ಹೊಸ ಹುಮ್ಮಸ್ಸಿನಿಂದ ಮುಂದಡಿ ಇಡುತ್ತಿದೆ. ಹೊಸ ಹೊಸ ಸಿನಿಮಾಗಳು ಘೋಷಣೆಯಾಗುತ್ತಿವೆ.

ಆ ಸಾಲಿಗೆ 'ಬಿಸಿಬಿಸಿ ICE–CREAM' ಸಿನಿಮಾ ಕೂಡ ಸೇರಿದೆ. ಈ ಹಿಂದೆ 'ಕಹಿ', 'ಅಳಿದು ಉಳಿದವರು' ಸಿನಿಮಾ ನಿರ್ದೇಶಿಸಿದ್ದ ಅರವಿಂದ್ ಶಾಸ್ತ್ರಿ, ಈಗ 'ಬಿಸಿಬಿಸಿ ICE–CREAM' ಕಥೆ ಹೇಳಲು ಹೊರಟಿದ್ದಾರೆ. ಈ ಸಿನಿಮಾದಲ್ಲಿ ಆ್ಯಕ್ಷನ್ ಕಟ್ ಹೇಳುವುದರ ಜೊತೆಗೆ ಸಂಕಲನದ ಜವಾಬ್ದಾರಿಯನ್ನೂ ಹೊತ್ತುಕೊಂಡಿದ್ದಾರೆ. ಹೊಸ ವರ್ಷಕ್ಕೆ ಶೀರ್ಷಿಕೆ ಬಿಡುಗಡೆ ಮಾಡಿದ್ದು, ಸದ್ದಿಲ್ಲದೇ ಶೂಟಿಂಗ್ ಮುಗಿಸಿ ಬಿಡುಗಡೆ ಹೊಸ್ತಿಲಿನಲ್ಲಿ ನಿಂತಿದೆ.

ಸಿನಿಮಾದ ಕಥೆಗೆ ಸೂಕ್ತ ಎನ್ನುವ ಕಾರಣಕ್ಕೆ ಅರವಿಂದ್, ಈ ಶೀರ್ಷಿಕೆಯನ್ನು ಇಟ್ಟಿದ್ದಾರೆ. ಡಾರ್ಕ್ ಕಾಮಿಡಿ ರೊಮ್ಯಾನ್ಸ್ ಕಥಾಹಂದರ ಹೊಂದಿರುವ ಈ ಚಿತ್ರದಲ್ಲಿ ಅರವಿಂದ್ ಐಯ್ಯರ್, ಸಿರಿ ರವಿಕುಮಾರ್ ನಟಿಸುತ್ತಿದ್ದು, ಗೋಪಾಲಕೃಷ್ಣ ದೇಶಪಾಂಡೆ ಮುಖ್ಯಭೂಮಿಕೆಯಲ್ಲಿದ್ದಾರೆ.

ನಾಲ್ಕು ವರ್ಷದ ಬಳಿಕ ನಿರ್ದೇಶನದತ್ತ ಹೊರಳಿರುವ ಅರವಿಂದ್, ತಾಜಾ ಕಥೆಯನ್ನು ಪ್ರೇಕ್ಷಕರಿಗೆ ನೀಡುವುದಾಗಿ ಹೇಳಿದ್ದಾರೆ. ■

# ಶ್ರುತಿ ಪ್ರಕಾಶ್‌ಗೆ ಒಲಿದ 'ಫ್ರೈಡೆ'

'ಲಂಡನ್‌ನಲ್ಲಿ ಲಂಬೋದರ', 'ಕಸ್ತೂರಿ ಮಹಲ್' ಹಾಗೂ 'ಕಡಲ ತೀರದ ಭಾರ್ಗವ' ಸೇರಿದಂತೆ ಕನ್ನಡದ ಹಲವು ಸಿನಿಮಾಗಳಲ್ಲಿ ನಟಿಸಿರುವ ನಟಿ ಶ್ರುತಿ ಪ್ರಕಾಶ್ ಹೊಸ ಸಿನಿಮಾವೊಂದಕ್ಕೆ ಸಹಿ ಹಾಕಿದ್ದಾರೆ.

'ಮೇಡ್ ಇನ್ ಬೆಂಗಳೂರು' ಚಿತ್ರದ ನಾಯಕ ಮಧುಸೂದನ್ ಗೋವಿಂದ್‌ಗೆ ಜೋಡಿಯಾಗಿ 'ಫ್ರೈಡೆ' ಸಿನಿಮಾದಲ್ಲಿ ಅಭಿನಯಿಸುತ್ತಿದ್ದಾರೆ. ಈ ಸಿನಿಮಾ ಮುಹೂರ್ತ ಈಚೆಗಷ್ಟೆ ನೆರವೇರಿದೆ. ಸಿನಿಮಾ ಬಗ್ಗೆ ಶ್ರುತಿ ಕೆಲವು ಮಾತುಗಳನ್ನು ಆಡಿದ್ದಾರೆ.

'ರಸ್ತೆ ಜಗಳದ ವಿಷಯದ ಮೇಲೆ ಸಿನಿಮಾ ರೂಪಿಸಲಾಗಿದೆ. ಈಗ ನಗರ ಪ್ರದೇಶಗಳಲ್ಲಿ ರಸ್ತೆ ಜಗಳ ಪ್ರತಿನಿತ್ಯದ ಸಂಗತಿ. ಹೀಗಾಗಿ ಜನರಿಗೆ ಇದು ಸುಲಭವಾಗಿ ರಿಲೇಟ್ ಆಗುತ್ತದೆ' ಎಂದು ಹೇಳಿದ್ದಾರೆ.

ಈ ಸಿನಿಮಾದಲ್ಲಿ ತಮ್ಮದು ವಿಶೇಷ ರೀತಿಯ ಪಾತ್ರ ಎಂದಿರುವ ಶ್ರುತಿ, ಈ ಪಾತ್ರವನ್ನು ಅಷ್ಟೇ ವಿಶೇಷವಾಗಿ ನಿಭಾಯಿಸುವ ತಯಾರಿ ನಡೆಸಿದ್ದಾರಂತೆ. ಶುಕ್ರವಾರ ಬಿಡುಗಡೆಯಾದ ಸಿನಿಮಾ ನೋಡಲು ಹೋಗಿದ್ದ ದಂಪತಿಯ ಜೀವನದಲ್ಲಿ ಘಟನೆಯೊಂದು ನಡೆಯುತ್ತದೆ. ಅದೇ ಈ ಚಿತ್ರದ ಕಥಾಹಂದರ ಎಂದು ಕಥೆಯ ಬಗ್ಗೆ ಸುಳಿವು ನೀಡಿದ್ದಾರೆ.

'ನಿರ್ದೇಶಕರಾದ ಕೀರ್ತಿ ಹಾಗೂ ವೈಶಾಖ್ ಈ ಪಾತ್ರವನ್ನು ನನ್ನ ಮುಂದಿಟ್ಟರು. ಈ ಸಿನಿಮಾದಲ್ಲಿ ಮಾನಸಿಕ ಆರೋಗ್ಯದ ಬಗ್ಗೆಯೂ ಹೇಳಲಾಗಿದೆ. ಇದು ಪ್ರೇಕ್ಷಕರಿಗೆ ಬೋನಸ್. ನಮ್ಮ ನೆಮ್ಮದಿ, ಮಾನಸಿಕ ಶಾಂತಿಯನ್ನು ಹಾಳುಮಾಡುವಂಥ ಸಾಕಷ್ಟು ಸಂಗತಿಗಳು ನಡೆಯುತ್ತಲೇ ಇರುತ್ತವೆ. ಅಂಥ ಪರಿಸ್ಥಿತಿಯನ್ನು ಹೇಗೆ ನಿಭಾಯಿಸಬೇಕು ಎಂಬುದನ್ನು ಅರ್ಥ ಮಾಡಿಕೊಳ್ಳಲು ಹೋಗುವುದಿಲ್ಲ. ಇಂಥ ಸಮಯದಲ್ಲಿ ನಮಗೆ ನಾವೇ ಸಮಾಧಾನ ಹೇಳಿಕೊಳ್ಳಬೇಕು. ಯಾವುದೇ ಪರಿಸ್ಥಿತಿಯು ನಮ್ಮ ಮಾನಸಿಕ ಆರೋಗ್ಯವನ್ನು ಆಳದಂತೆ ಎಚ್ಚರವಹಿಸಬೇಕು' ಎಂದು ಮಾನಸಿಕ ಆರೋಗ್ಯದ ಮಹತ್ವದ ಬಗ್ಗೆಯೂ ಮಾತನಾಡಿದ್ದಾರೆ ಶ್ರುತಿ. ■

